‘ಹಿಂದೂ ಜನಜಾಗೃತಿ ಸಮಿತಿ’ ಪುರಸ್ಕೃತ ಗ್ರಂಥ !

ದೇವತೆಗಳ ಉಪಾಸನೆ : ಶಕ್ತಿ - ಖಂಡ ೬

# ಗಂಗಾಮಹಾತ್ಮೆ

## (ಆಧ್ಯಾತ್ಮಿಕ ವೈಶಿಷ್ಟ್ಯಗಳು ಮತ್ತು ಉಪಾಸನೆ ಸಹಿತ)

(Importance of Ganga) ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೫’ ರಲ್ಲಿ ಓದಿ.)

**ಸದ್ಗುರು ಡಾ. ಚಾರುದತ್ತ ಪ್ರಭಾಕರ ಪಿಂಗಳೆ**



**ಸನಾತನ ಸಂಸ್ಥೆ**

---

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ

Shree Siddheshwar Dharmajagruti Sanstha

ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ, ಉಡುಪಿ 576 101,

ಕರ್ನಾಟಕ. ದೂ.ಕ್ರ. : +91 93424 35617 ಇತರ ದೂ.ಕ್ರ. (ಗೋವಾ) :

+91 (0832) 2312664, ಇ–ಅಂಚೆ : granth@sanatan.org

**1st Edition** : Deepavali, Kaliyug Varsh 5116 (23.10.2014)

**4th Reprint** : Datta Jayanti, Kaliyug Varsh 5124 (7.12.2022)

Translated from the original Marathi text ‘Gangamahatmya’

ಪ್ರಸ್ತುತ ಗ್ರಂಥವು ಹಿಂದಿ ಭಾಷೆಯಲ್ಲೂ ಲಭ್ಯವಿದೆ.

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 55/- **ISBN :** 978-93-82165-95-8 ಓಂ ಗ್ರಂಥ ಕ್ರ. : 194



**© ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಅನುಕ್ರಮಣಿಕೆ

卐 ಮನೋಗತ ೬

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೭

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೫೪

---

೧. 'ಗಂಗಾ' ಶಬ್ದದ ವ್ಯುತ್ಪತ್ತಿ ಮತ್ತು ಅರ್ಥ ೮

೨. ಬ್ರಹ್ಮಾಂಡದಲ್ಲಿ ಗಂಗಾ ನದಿಯ ಉತ್ಪತ್ತಿ ಮತ್ತು ಭೂಲೋಕದಲ್ಲಿ ಅವತರಣ ೮

೩. ಗಂಗೆಯ ಇತರ ಕೆಲವು ಹೆಸರುಗಳು ೧೦

೪. ವೈಶಿಷ್ಟ್ಯಗಳು ೧೧

೫. ಗಂಗೆಯ ಮಹತ್ವ ೨೧

೬. ಹಿಂದೂಗಳ ಜೀವನದರ್ಶನದಲ್ಲಿನ ಗಂಗೋದಕದ ಸ್ಥಾನ ೨೩

೭. ಗಂಗಾತೀರದಲ್ಲಿನ ತೀರ್ಥಕ್ಷೇತ್ರಗಳು ೨೫

೮. ಗಂಗಾಸ್ನಾನ ಮತ್ತು ಅದರ ಮಹತ್ವ ೩೦

೯. ಗಂಗಾಪರಿವಾರ ೩೪

೧೦. ಮೂರ್ತಿವಿಜ್ಞಾನ ೩೪

೧೧. ಭಕ್ತಾದಿಗಳು ಗಂಗೆಯ ಸಂದರ್ಭದಲ್ಲಿ ಮಾಡಬೇಕಾದ ವ್ಯಷ್ಟಿ ಸಾಧನೆ ೩೫

೧೨. ಭಕ್ತಾದಿಗಳು ಗಂಗೆಯ ಸಂದರ್ಭದಲ್ಲಿ ಮಾಡಬೇಕಾದ ಸಮಷ್ಟಿ ಸಾಧನೆ ೪೮

೧೩. ಭಾವೀ ಹಿಂದೂ ರಾಷ್ಟ್ರದಲ್ಲಿ ಗಂಗಾನದಿಯು ಪರಮಪವಿತ್ರವಾಗಿರುವುದು ! ೫೨

### ಡಾ. ಜಯಂತ ಆಠವಲೆಯವರ ಹೆಸರಿಗೆ ಸೇರಿಸುವ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಈ ಬಿರುದಿನಿಂದ ಸಂಬೋಧಿಸಲಾಗಿದೆ.

**– (ಪೂ.) ಶ್ರೀ. ಸಂದೀಪ ಆಳಶಿ, ಸನಾತನ ಆಶ್ರಮ, ಗೋವಾ (೨೪.೭.೨೦೨೨)**

# ಮನೋಗತ

ಪುಣ್ಯಸಲಿಲಾ ಗಂಗಾ ನದಿಯ ಮಹತ್ವವು ಅದ್ವಿತೀಯವಾಗಿದೆ ! ಭೌಗೋಳಿಕ ದೃಷ್ಟಿಯಿಂದ ಗಂಗಾ ನದಿಯು ಭಾರತವರ್ಷದ ಹೃದಯರೇಖೆಯಾಗಿದೆ ! ಇತಿಹಾಸದ ದೃಷ್ಟಿಯಿಂದ ಪ್ರಾಚೀನ ಕಾಲದಿಂದ ಆಧುನಿಕ ಕಾಲದ ವರೆಗೆ ಮತ್ತು ಗಂಗೋತ್ರಿಯಿಂದ ಗಂಗಾಸಾಗರದ ವರೆಗಿನ ಗಂಗೆಯ ಕಥೆ ಎಂದರೆ ಹಿಂದೂಗಳ ಸಭ್ಯತೆ ಮತ್ತು ಸಂಸ್ಕೃತಿಯ ಅಮೃತಗಾಥೆಯಾಗಿದೆ. ರಾಷ್ಟ್ರದ ದೃಷ್ಟಿಯಿಂದ ಆಚಾರ-ವಿಚಾರ, ವೇಷಭೂಷಣ, ಜೀವನಪದ್ಧತಿ ಮತ್ತು ವಿಭಿನ್ನ ಜಾತಿಯವರನ್ನು ಒಂದಾಗಿಸುವ ಗಂಗಾ ನದಿಯು ಹಿಂದೂಸ್ಥಾನದ ರಾಷ್ಟ್ರ-ಪ್ರತೀಕವೇ ಆಗಿದೆ. ಧಾರ್ಮಿಕದೃಷ್ಟಿಯಿಂದ ಇತಿಹಾಸದ ಉಷಃಕಾಲದಿಂದ ಕೋಟಿಕೋಟಿ ಹಿಂದೂ ಭಕ್ತರಿಗೆ ಮೋಕ್ಷವನ್ನು ಪ್ರದಾನಿಸುವ ಗಂಗಾ ವಿಶ್ವದ ಸರ್ವಶ್ರೇಷ್ಠ ತೀರ್ಥವಾಗಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಗೀತೆಗಿರುವ ಸ್ಥಾನವೇ ಗಂಗೆಗೆ ಧಾರ್ಮಿಕ ಕ್ಷೇತ್ರದಲ್ಲಿದೆ. ಈ ಗ್ರಂಥದಲ್ಲಿ ಪ್ರಮುಖವಾಗಿ ಗಂಗೆಯ ಮಹಾತ್ಮೆಯನ್ನು ವರ್ಣಿಸಲಾಗಿದೆ.

ಗಂಗಾ ಸರ್ವದೇವಮಯಿ, ಸರ್ವತೀರ್ಥಮಯಿ, ಸರಿತ್‌ಶ್ರೇಷ್ಠಾ ಮತ್ತು ಮಹಾನದಿಯಂತೂ ಆಗಿದ್ದಾಳೆ; ಆದರೆ 'ಸರ್ವಪಾತಕನಾಶಿನಿ' (ಎಲ್ಲ ಪಾಪಗಳನ್ನು ನಾಶ ಮಾಡುವವಳು) ಯು ಅವಳ ಮುಖ್ಯ ಪರಿಚಯವಾಗಿದೆ. ಜಗನ್ನಾಥ ಪಂಡಿತರು ಗಂಗೆಗೆ ಪ್ರಾರ್ಥನೆ ಮಾಡುವಾಗ ಹೀಗೆ ಹೇಳುತ್ತಾರೆ, 'ಜಲಂ ತೆ ಜಂಬಾಲಂ ಮಮ ಜನನಜಾಲಂ ಜರಯತು ।' ಅಂದರೆ ಗಂಗಾಮಾತೆ ! ಪಾಚಿ ಮತ್ತು ಕೆಸರಿರುವ ನಿನ್ನ ನೀರು ನನ್ನ ಪಾಪಗಳನ್ನು ದೂರಗೊಳಿಸಲಿ. (ಗಂಗಾಲಹರಿ, ಶ್ಲೋಕ ೨೦)' ಪ್ರತಿಯೊಬ್ಬ ಹಿಂದೂವೂ ಆಯುಷ್ಯದಲ್ಲಿ ಒಮ್ಮೆಯಾದರೂ ಪತಿತಪಾವನ ಗಂಗೆಯಲ್ಲಿ ಸ್ನಾನ ಮಾಡುವ ಅಭಿಲಾಷೆಯನ್ನಿಡುತ್ತಾನೆ. ಹಿಂದೂ ಧರ್ಮವು 'ಗಂಗಾಸ್ನಾನ'ವನ್ನು ಒಂದು ಧಾರ್ಮಿಕ ವಿಧಿ ಎಂದು ಪರಿಗಣಿಸಿದೆ. ಈ ವಿಧಿಯನ್ನು ಸುಲಭವಾಗಿ ಮಾಡಲು ಸಾಧ್ಯವಾಗಬೇಕೆಂದು ಈ ಗ್ರಂಥದಲ್ಲಿ 'ಗಂಗಾಸ್ನಾನವಿಧಿ' ಮತ್ತು 'ಗಂಗಾಪೂಜಾವಿಧಿ'ಯನ್ನು ಸವಿಸ್ತಾರವಾಗಿ ಕೊಡಲಾಗಿದೆ.

ಗಂಗಾ ನದಿಯ ತೀರವು ತೀರ್ಥಕ್ಷೇತ್ರವಾಗಿದ್ದು ಅದು ಹಿಂದೂಗಳಿಗೆ ಅತಿ ವಂದನೀಯ ಮತ್ತು ಉಪಾಸನೆಗಾಗಿ ಪವಿತ್ರ ಸಿದ್ಧಿಕ್ಷೇತ್ರವೇ ಆಗಿದೆ. ಅದರ ಮಹಾತ್ಮೆಯನ್ನೂ ಈ ಗ್ರಂಥದಲ್ಲಿ ಸ್ಪಷ್ಟಪಡಿಸಲಾಗಿದೆ. ಗಂಗಾದರ್ಶನ, ಗಂಗಾಸ್ನಾನ ಮತ್ತು ಪಿತೃತರ್ಪಣ ಈ ಮಾರ್ಗಗಳಿಂದ ಮೋಕ್ಷವನ್ನು ಸಾಧ್ಯಗೊಳಿಸಬಹುದು ಎಂಬ ಸತ್ಯವನ್ನು ಧರ್ಮಾಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಗಂಗೋಪಾಸಕನು ಮಾಡಬೇಕಾದ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯ ಬಗ್ಗೆ ಈ ಗ್ರಂಥದಲ್ಲಿ ಸವಿಸ್ತಾರ ಮಾರ್ಗದರ್ಶನ ನೀಡಲಾಗಿದೆ. ಈ ಗ್ರಂಥವನ್ನು ಓದಿ ಸುರಸರಿತೆ (ದೇವನದಿ) ಗಂಗೆಯ ಬಗ್ಗೆ ಭಕ್ತರ ಭಾವಜಾಗೃತಿಯಾಗಬೇಕು ಮತ್ತು ಅವರಿಗೆ ಭಾವಪೂರ್ಣ ಗಂಗೋಪಾಸನೆ ಮಾಡಲು ಪ್ರೇರಣೆ ಸಿಗಬೇಕೆಂದು ಶ್ರೀ ಗಂಗಾದೇವಿಯ ಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**